<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>

<u>ಸಿ.ಸಿ. ನಂ.730/2025</u>

<u>ಫಿರ್ಯಾದುದಾರರುಃ</u> **ಸರ್ಕಾರದ ಪರವಾಗಿ ಹರಿಹರಪುರ ಪೊಲೀಸರು**

ವಿರುದ್ಧ

ಆರೋಪಿ/ತರುಃ	ಃ	ಅಬ್ದುಲ್ ತೋಹಿದ್ ಬಿನ್ ಅಬ್ದುಲ್ ವಾಜಿದ್, 19 ವರ್ಷ, ವಿದ್ಯಾರ್ಥಿ, ವಾಸ ದೇವರಮನೆ, ಯಡದಂಟಿ ಗ್ರಾಮ, ಹರಿಹರಪುರ, ಕೊಪ್ಪ ತಾಲ್ಲೂಕು.

<u>ದೋಷಾರೋಪಣೆ</u>

ಶ್ರೀಮತಿ ಎಂ.ಎನ್. ನಂದಿನಿ, ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಹರಿಹರಪುರ ಪೊಲೀಸ್ ಠಾಣಾ ವ್ಯಾಪ್ತಿಯ ಯಡದಂಟಿ ಗ್ರಾಮ, ದೇವರಮನೆಯಲ್ಲಿ ಆರೋಪಿ ಅಬ್ದುಲ್ ತೋಹಿದ್ ಈತನು ದಿನಾಂಕ 28.05.2025 ರಂದು ಸಂಜೆ 7-47 ಗಂಟೆ ಸಮಯದಲ್ಲಿ ವಿವೋ T3 5G ಮೊಬೈಲ್ ನಲ್ಲಿ ಆತನ ತಾಯಿ ಶಬಿನಾರವರ ಹೆಸರಿನಲ್ಲಿರುವ 9480497534 ನಂಬರಿನ ಏರ್ ಟೇಲ್ ಸಿಮ್ ಬಳಸಿ ತನ್ನ ಮೊಬೈಲಿನ ಇನ್ಸ್ಟಾಗ್ರಾಮ್ ನಲ್ಲಿ chikmagalur_ka_king ಎಂಬ ಹೆಸರಿನ ಐಡಿ ಇಟ್ಟುಕೊಂಡು ಅದರಲ್ಲಿ Inshallah revenge soon just wait and watch. Allahu Akbar ಎಂದು ಪೋಸ್ಟ್ ಹಾಕಿದ್ದು ಆಗಿರುತ್ತದೆ. ಈ ಬಗ್ಗೆ ದಿನಾಂಕ 29.05.2025 ರಂದು ಚಾಸಾ.1 ಶ್ರೀ ಕೃಷ್ಣನಾಯ್ಕ, ಸಿಪಿಸಿ 141 ರವರು ತನ್ನ ಮೊಬೈಲ್ ನಲ್ಲಿ ನೋಡಿ ಆರೋಪಿತನು ಸಾಮಾಜಿಕ ಜಾಲತಾಣ ಇನ್ಸ್ಟಾಗ್ರಾಮ್ ನಲ್ಲಿ ಬೇರೆ ಬೇರೆ ಧರ್ಮದ, ಜನಾಂಗದ ಜಾತಿ, ಜನಸಮುದಾಯದ ನಡುವೆ ವೈರತ್ವ, ದ್ವೇಷ, ವೈಮನಸ್ಯದ ಭಾವನೆಗಳನ್ನು ಬೆಳೆಸಿ ಸಾರ್ವಜನಿಕ ನೆಮ್ಮದಿಗೆ ಭಂಗವನ್ನುಂಟು ಮಾಡುವ ಉದ್ದೇಶದಿಂದ ಹರಿಬಿಟ್ಟು ಪ್ರಸಾರ ಮಾಡಿ, **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 352(2)**ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಪ್ರಃ1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ತಿಳಿಯಿತು.

ಪ್ರಃ2ಃ ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ವಿಚಾರಣೆಯಾಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ 21.02.2026.

ಸಹಿ/- 21.02.2026.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂಃ ಕೊಪ್ಪ.

ಆರೋಪಿಯ ಸಹಿಃ